ಸಿವ್ಹಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಪನಹಳ್ಳಿ

ಉಪಸ್ಥಿತರು:- ಶ್ರೀ.ವೈ.ಕೆ.ಬೇನಾಳ, ಬಿ.ಎ. ಎಲ್ಎಲ್ಬಿ, (ಆನರ್ಸ್),
ಸಿವ್ಹಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಹರಪನಹಳ್ಳಿ.

<u>ದಿನಾಂಕ : ೦೪ ನೇ ಫೆಬ್ರವರಿ ೨೦೧೭</u>

ಅಸಲು ದಾವಾ ಸಂಖ್ಯೆ: ೨೪೧/೨೦೧೫

<u>ವಾದಿ:-</u>

ಪ್ಯಾರಿಮಾಭೀ

ವಿರುದ್ಧ

<u>ಪ್ರತಿವಾದಿ:-</u>

ಯೂನುಸ್ ಸಾಬ್

<u>ಮಧ್ಯಂತರ ಅರ್ಜಿ ಸಂಖ್ಯೆ : ೧</u>

<u>ಅರ್ಜಿದಾರಳು:-</u>

ಪ್ಯಾರಿಮಾಭೀ ಗಂಡ ಓಬಲಾಪುರದ ಮನ್ಸೂರ್ ಸಾಬ್,
ವಯಸ್ಸು ೩೫ ವರ್ಷ, ವಾಸ: ೨ ನೇ ವಾರ್ಡ್, ಬಣಗೇರಿ, ಹರಪನಹಳ್ಳಿ.

(ಅರ್ಜಿದಾರಳ ಪರ ವಕೀಲರು: ಶ್ರೀ.ಟಿ.ಹೆಚ್.ಎಂ.ಮಹೇಶ್)

ವಿರುದ್ಧ

<u>ಎದುರುದಾರರು:-</u>

ಯೂನುಸ್ ಸಾಬ್ ತಂದೆ ಅಬೂಬಕರ್, ವಯಸ್ಸು ೫೫ ವರ್ಷ,
ವಾಸ: ಬಳಿಗಾರ ಸ್ಟ್ರೀಟ್, ವಾರ್ಡ್ ನಂ.೧೩, ಹರಪನಹಳ್ಳಿ ಟೌನ್, ದಾವಣಗೆರೆ ಜಿಲ್ಲೆ.

(ಎದುರುದಾರನ ಪರ ವಕೀಲರು: ಶ್ರೀ.ಶ್ರೀನಿವಾಸ್ ಕಲಾಲ್)

## ಮಧ್ಯಂತರ ಅರ್ಜಿ ಸಂಖ್ಯೆಃ ೧ ರ ಮೇಲೆ ಆದೇಶ

ವಾದಿ ಈ ಮಧ್ಯಂತರ ಅರ್ಜಿ ಸಂಖ್ಯೆ ೧ ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ ೩೯ ನಿಯಮ ೧ ಮತ್ತು ೨ ಹಾಗೂ ಸಹ ವಾಚಕ ಕಲಂ ೧೫೧ ರ ಅಡಿಯಲ್ಲಿ ಸಲ್ಲಿಸಿ ದಾವಾ ಆಸ್ತಿಯಲ್ಲಿ ತನ್ನ ಸ್ವಾಧೀನತೆಗೆ ಪ್ರತಿವಾದಿ ಹಸ್ತಕ್ಷೇಪ ಮಾಡದಂತೆ ದಾವೆ ಅಂತಿಮವಾಗಿ ಇತ್ಯರ್ಥಗೊಳ್ಳುವವರೆಗೂ ಪ್ರತಿವಾದಿಯ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕೆಂದು ಕೋರಿರುತ್ತಾಳೆ.

೨. ವಾದಿ ಈ ಮಧ್ಯಂತರ ಅರ್ಜಿಯನ್ನು ತನ್ನ ಪ್ರಮಾಣ ಪತ್ರದೊಂದಿಗೆ ಸಲ್ಲಿಸಿ ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾಳೆ.

೩. ಪ್ರತಿವಾದಿಗೆ ಈ ಮಧ್ಯಂತರ ಅರ್ಜಿಯ ನೋಟಿಸ್‌ನ್ನು ಕಳುಹಿಸಲಾಗಿ ಪ್ರತಿವಾದಿ ತನ್ನ ವಕೀಲರ ಮೂಲಕ ಹಾಜರಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾನೆ ಮತ್ತು ಮೆಮೋ ಸಲ್ಲಿಸುವುದರ ಮೂಲಕ ತನ್ನ ಲಿಖಿತ ಹೇಳಿಕೆಯನ್ನೇ ಈ ಮಧ್ಯಂತರ ಅರ್ಜಿಗೆ ತಕರಾರು ಎಂದು ಅಳವಡಿಸಿಕೊಂಡಿರುತ್ತಾನೆ.

೪. ವಾದಿ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ಪ್ರತಿವಾದಿ ಪರ ವಕೀಲರು ಲಿಖಿತ ವಾದವನ್ನು ಸಲ್ಲಿಸಿರುತ್ತಾರೆ.

೫. ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

ಅಂಶ-೧ ಃ- ವಾದಿ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರವನ್ನು ಪಡೆಯಲು ಮೇಲ್ನೋಟದ ಕೇಸು ಇರುವುದನ್ನು ತೋರಿಸಿದ್ದಾಳೆಯೇ?

ಅಂಶ-೨ಃ- ಅನುಕೂಲತೆಯ ಒಲವು ಯಾರ ಪರ ಇದೆ?

ಅಂಶ-೩:- ಈ ಮಧ್ಯಂತರ ಅರ್ಜಿ ಸಂಖ್ಯೆ ೧ ರಲ್ಲಿ ಕೋರಿರುವಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡದೆ ಇದ್ದಲ್ಲಿ ವಾದಿಗೆ ಹಣದ ರೂಪದಲ್ಲಿ ತುಂಬಲಾರದಂತಹ ನಷ್ಟ ಉಂಟಾಗುತ್ತದೆಯೇ?

ಅಂಶ-೪:- ಯಾವ ಆದೇಶ?

೬. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಕೆಳಗಿನಂತೆ ಉತ್ತರಿಸುತ್ತಿದ್ದೇನೆ.

ಅಂಶ ೧: ಸಕಾರಾತ್ಮಕ

ಅಂಶ ೨: ವಾದಿಯ ಪರ

ಅಂಶ ೩: ಸಕಾರಾತ್ಮಕ

ಅಂಶ ೪: ಅಂತಿಮ ಆದೇಶದಂತೆ:

-:: ಕಾ ರ ಣ ಗ ಳು ::-

೭. ಅಂಶ ೧ : ವಾದಿ ದಾವಾ ಆಸ್ತಿ ಸ.ನಂ.೧೬೧ಸಿ೨ ವಿಸ್ತೀರ್ಣ ೦.೦೨ ಸೆಂಟ್ಸ್‌ಗೆ ತಾನು ಮಾಲಕಳು ಹಾಗೂ ಸ್ವಾಧೀನದಾರಳಾಗಿದ್ದು ಸದರಿ ಆಸ್ತಿಗೆ ಸಂಬಂಧಿಸಿದಂತೆ ತನ್ನ ಗಂಡ ಮನ್‌ಸೂರ್‌ಸಾಬ್ ದಿನಾಂಕ:೩೦.೧೦.೨೦೧೫ ರಂದು ನೊಂದಾಯಿತ ದಾನಪತ್ರವನ್ನು ತನ್ನ ಪರ ಬರೆದುಕೊಟ್ಟಿರುತ್ತಾನೆ ಅದರಂತೆ ತನ್ನ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ ಮತ್ತು ದಾವಾ ಆಸ್ತಿ ದಿನಾಂಕ:೨೭.೧೧.೨೦೦೪ ರಂದು ಮೃತ ಇಸ್ಮಾಯಿಲ್ ಸಾಬ್‌ನ ೪ ಜನ ಮಕ್ಕಳು ಭಾಗ ಮಾಡಿಕೊಂಡಾಗ ದಾವಾ ಆಸ್ತಿ ವಾದಿಯ ಗಂಡನ ಭಾಗಕ್ಕೆ ಬಂದಿತ್ತು ಅದರಂತೆ ವಾದಿ ತಾನು ದಾವಾ ಆಸ್ತಿಗೆ ಮಾಲಕಳು ಹಾಗೂ ಸ್ವಾಧೀನದಾರಳಾಗಿದ್ದು ಪ್ರತಿವಾದಿ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಹೊಂದದೇ ಇದ್ದರೂ ಸಹ ದಾವಾ ಆಸ್ತಿಗೆ ಬಂದು ಇಟ್ಟಿಗೆ ಮರಳನ್ನು ಸಂಗ್ರಹಿಸಿ ಕಾನೂನುಬಾಹಿರವಾಗಿ ಮನೆಯನ್ನು ಕಟ್ಟಲು ಪ್ರಯತ್ನಿಸಿರುತ್ತಾನೆ ಎಂದು ಪ್ರತಿವಾದಿಯ

ವಿರುದ್ಧ ದಾವಾ ಆಸ್ತಿಯಲ್ಲಿ ತನ್ನ ಸ್ವಾಧೀನತೆಗೆ ಹಸ್ತಕ್ಷೇಪ ಮಾಡದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ತನ್ನ ವಾದಪತ್ರದಲ್ಲಿ ಕೋರಿರುವುದರಿಂದ ಮತ್ತು ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿಯನ್ನು ವಾದಿಯ ಗಂಡ ೧,೧೦,೦೦೦/- ರೂಗಳಿಗೆ ದಿನಾಂಕ:೩೦.೧೦.೨೦೦೬ ರಂದು ಮುಸ್ಲಿಂ ಅಲ್ಪಸಂಖ್ಯಾತ ಶಿಕ್ಷಣ ಮತ್ತು ಅಭಿವೃದ್ಧಿ ಸಂಘದ ಅಧ್ಯಕ್ಷರ ಹೆಸರಿಗೆ ಮಾರಾಟ ಮಾಡಿರುತ್ತಾನೆ ಎಂದು ಮತ್ತು ವಾದಿ ದಾವಾ ಆಸ್ತಿಯ ಸ್ವಾಧೀನತೆಯಲ್ಲಿ ಇರುತ್ತಾಳೆ ಎನ್ನುವುದನ್ನು ಸುಳ್ಳು ಎಂದು ಅಲ್ಲಗಳೆದಿರುತ್ತಾನೆ ಅಲ್ಲದೇ ಪ್ರತಿವಾದಿ ತನಗೆ ದಾವಾ ಆಸ್ತಿಯಲ್ಲಿ ಯಾವ ರೀತಿಯ ಹಕ್ಕು ಇರುತ್ತದೆ ಎಂದು ಹೇಳಿಲ್ಲ ಮತ್ತು ಪ್ರತಿವಾದಿಯ ಲಿಖಿತ ಹೇಳಿಕೆಯ ಪ್ರಕಾರ ದಾವಾ ಆಸ್ತಿ ಪ್ರತಿವಾದಿಗೆ ಸಂಬಂಧ ಪಟ್ಟಿದ್ದು ಅಲ್ಲ ಆದರೆ ಮೂಲತಃ ವಾದಿಯ ಗಂಡನಿಗೆ ಸಂಬಂಧಪಟ್ಟದ್ದು ಎನ್ನುವುದು ಆಗಿರುತ್ತದೆ ಅಲ್ಲದೇ ವಾದಿ ದಾವಾ ಆಸ್ತಿಯ ಸ್ವಾಧೀನತೆಯಲ್ಲಿ ಎಂದಿಗೂ ಇಲ್ಲ ಎಂದು ಪ್ರತಿವಾದಿ ವಾದಿಯ ಸ್ವಾಧೀನತೆಯನ್ನು ಅಲ್ಲಗಳೆದ ಕಾರಣ ವಾದಿ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರವನ್ನು ಪಡೆಯಲು ವಾದಿ ಮೇಲ್ನೋಟದ ಕೇಸು ಇರುವುದನ್ನು ತೋರಿಸಬೇಕು ಆ ಕುರಿತಂತೆ ವಾದಿಯ ಪರ ಇರುವ ದಾಖಲೆಗಳನ್ನು ಅವಲೋಕಿಸಲಾಗಿ ದಿನಾಂಕ:೨೬.೧೧.೨೦೦೪ ರಂದು ವಾದಿಯ ಗಂಡ ಮತ್ತು ಅವರ ಸಹೋದರರು ಸೇರಿ ಸ.ನಂ.೧೬೧ಸಿ೨ ಜಮೀನನ್ನು ಪಾಲುವಿಭಾಗ ಮಾಡಿಕೊಂಡಿದ್ದು ಅದರಲ್ಲಿ ೦.೦೨ ಸೆಂಟ್ಸ್ ವಾದಿಯ ಗಂಡನ ಭಾಗಕ್ಕೆ ಬಂದಿರುವುದು ಸದರಿ ಪಾಲುವಿಭಾಗ ಪತ್ರದ ಮೂಲಕ ಮೇಲ್ನೋಟಕ್ಕೆ ಕಂಡು ಬರುತ್ತದೆ ಅಲ್ಲದೇ ೨೦೧೫-೨೦೧೬ ನೇ ಸಾಲಿನ ಪಹಣಿಪತ್ರಿಕೆಯಲ್ಲಿ ಸದರಿ ೦.೦೨ ಸೆಂಟ್ಸ್ ಜಮೀನು ವಾದಿಯ ಗಂಡನ ಹೆಸರಿನಲ್ಲಿ ಇರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಮತ್ತು ವಾದಿಯ ಗಂಡ ದಿನಾಂಕ:೩೦.೧೦.೨೦೧೫ ರಂದು ನೊಂದಾಯಿತ ದಾನಪತ್ರದ ಮೂಲಕ ದಾವಾ ಆಸ್ತಿಯನ್ನು ವಾದಿಗೆ ಕೊಟ್ಟಿರುವುದು ಸದರಿ ದಾನಪತ್ರದ ಮೂಲಕ ಮೋಲ್ನೋಟಕ್ಕೆ

ಕಂಡು ಬರುತ್ತದೆ ಅಲ್ಲದೇ ದಾನಪತ್ರದ ಆಧಾರದ ಮೇಲೆ ದಾವಾ ಆಸ್ತಿಯ ಖಾತೆ ವಾದಿಯ ಹೆಸರಿಗೆ ಬದಲಾವಣೆ ಗೊಂಡಿರುವುದು ಮ್ಯುಟೇಶನ್ ರಿಜಿಸ್ಟಾರ್ ಪ್ರತಿಯಿಂದ ಮೇಲ್ನೋಟಕ್ಕೆ ಕಂಡು ಬರುತ್ತದೆ ಮತ್ತು ಅದರಂತೆ ವಾದಿಯ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದು ಆಗಿರುವುದು ಮೇಲ್ನೋಟಕ್ಕೆ ಪಹಣಿ ಪತ್ರಿಕೆಯಿಂದ ಕಂಡು ಬರುತ್ತದೆ ಅಲ್ಲದೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ಆರೋಪಿಸಿದಂತೆ ಮತ್ತು ಪ್ರತಿವಾದಿಗಳ ಪರ ವಕೀಲರು ತಮ್ಮ ಲಿಖಿತ ವಾದ ಮಂಡನೆಯಲ್ಲಿ ಹೇಳಿರುವಂತೆ ದಿನಾಂಕಃ೩೦.೧೦.೨೦೦೬ ರಂದು ವಾದಿಯ ಗಂಡ ದಾವಾ ಆಸ್ತಿಯನ್ನು ೧,೧೦,೦೦೦/- ರೂಗಳಿಗೆ ಮಾರಾಟ ಮಾಡಿರುವುದಾಗಿ ಒಪ್ಪಿ ಕ್ರಯದ ಕರಾರು ಪತ್ರವನ್ನು ಮುಸ್ಲಿಂ ಅಲ್ಪಸಂಖ್ಯಾತ ಶಿಕ್ಷಣ ಮತ್ತು ಅಭಿವೃದ್ಧಿ ಸಂಘದ ಅಧ್ಯಕ್ಷರ ಹೆಸರಿಗೆ ಬರೆದು ಕೊಟ್ಟಿರುತ್ತಾನೆ ಎನ್ನುವುದಕ್ಕೆ ಮೇಲ್ನೋಟಕ್ಕೆ ಪ್ರತಿವಾದಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಅಲ್ಲದೇ ಲಿಖಿತ ಹೇಳಿಕೆಯಲ್ಲಿ ಆರೋಪಿಸಿದಂತೆ ವಾದಿಯ ಗಂಡ ಸದರಿ ಸಂಘದಿಂದ ಹಣ ಪಡೆದು ದಾಖಲೆಗಳನ್ನು ಬರೆದು ಕೊಟ್ಟ ಕುರಿತು ಮೇಲ್ನೋಟಕ್ಕೆ ಪ್ರತಿವಾದಿಯ ಪರ ಯಾವುದೇ ದಾಖಲೆಗಳು ಇಲ್ಲ ಅಲ್ಲದೇ ವಾದಿಯ ಗಂಡ ದಾವಾ ಆಸ್ತಿಯನ್ನು ವಾದಿಗೆ ದಾನಪತ್ರದ ಮೂಲಕ ಕೊಟ್ಟಿದ್ದು ಅದರಂತೆ ವಾದಿ ಹೆಸರಿಗೆ ಖಾತೆ ವರ್ಗಾವಣೆ ಆಗಿ ಪಹಣಿ ಪತ್ರಿಕೆಯಲ್ಲಿ ವಾದಿಯ ಹೆಸರು ನಮೂದಾಗಿರುವುದು ವಾದಿಯ ದಾಖಲೆಗಳಿಂದ ಮೇಲ್ನೋಟಕ್ಕೆ ಕಂಡು ಬರುತ್ತದೆ ಕಾರಣ ಮೇಲ್ನೋಟಕ್ಕೆ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ವಾದಿ ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿ ಇರುವುದು ಕಂಡು ಬರುತ್ತದೆ ಅಲ್ಲದೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ವಾದಿ ದಾವಾ ಆಸ್ತಿಯ ಸ್ವಾಧೀನತೆಯಲ್ಲಿ ಎಂದಿಗೂ ಇಲ್ಲ ಎಂದು ಹೇಳುವುದರ ಮೂಲಕ ವಾದಿಯ ಸ್ವಾಧೀನತೆಯನ್ನು ಅಲ್ಲಗಳೆದ ಕಾರಣ ಮೇಲ್ನೋಟಕ್ಕೆ ದಾವಾ ಆಸ್ತಿಯಲ್ಲಿ ವಾದಿಯ ಸ್ವಾಧೀನತೆಗೆ ಪ್ರತಿವಾದಿ ಹಸ್ತಕ್ಷೇಪ ಮಾಡಲು ಪ್ರಯತ್ನಿಸುತ್ತಿದ್ದಾನೆ ಎಂದು ಕಂಡು ಬರುತ್ತದೆ ಮತ್ತು ವಾದಿ ಹರಪನಹಳ್ಳಿ ಪೋಲಿಸರಿಗೆ

ಪ್ರತಿವಾದಿಯ ವಿರುದ್ಧ ದೂರನ್ನು ನೀಡಿರುವುದು ವಾದಿಯ ದಾಖಲೆಯಿಂದ ಮೇಲ್ನೋಟಕ್ಕೆ ಕಂಡು ಬರುತ್ತದೆ ಮತ್ತು ಸದರಿ ದಾಖಲೆಯ ಪ್ರಕಾರ ಪ್ರತಿವಾದಿ ದಾವಾ ಆಸ್ತಿಯಲ್ಲಿ ವಾದಿಯ ಸ್ವಾಧೀನತೆಗೆ ಹಸ್ತಕ್ಷೇಪ ಮಾಡಲು ಪ್ರಯತ್ನಿಸಿರುವುದು ಕಂಡು ಬರುತ್ತದೆ ಆದ್ದರಿಂದ ವಾದಿ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಾತ್ಕಲಿಕ ನಿರ್ಬಂಧಕಾಜ್ಞೆಯ ಪರಿಹಾರವನ್ನು ಪಡೆಯಲು ಮೇಲ್ನೋಟಕ್ಕೆ ತಾನು ದಾವಾ ಆಸ್ತಿಯ ಸ್ವಾಧೀನತೆಯಲ್ಲಿ ಇದ್ದು ಪ್ರತಿವಾದಿ ತನ್ನ ಸ್ವಾಧೀನತೆಗೆ ಹಸ್ತಕ್ಷೇಪ ಮಾಡಲು ಪ್ರಯತ್ನಿಸುತ್ತಿದ್ದಾನೆ ಎನ್ನುವುದನ್ನು ತೋರಿಸಿರುತ್ತಾಳೆ ಕಾರಣ ವಾದಿ ಮೇಲ್ನೋಟದ ಕೇಸು ಇರುವುದನ್ನು ತೋರಿಸಿರುವುದರಿಂದ ಅಂಶ ೧ ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

೮. <u>ಅಂಶಃ೨ ಮತ್ತು ೩</u> : ವಾದಿ ಮೇಲ್ನೋಟದ ಕೇಸು ಇರುವುದನ್ನು ತೋರಿಸಿದ್ದರೂ ಕೂಡ ಅನುಕೂಲತೆ ಒಲವು ತನ್ನ ಪರ ಇರುತ್ತದೆ ಮತ್ತು ಒಂದು ವೇಳೆ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡದೆ ಇದ್ದಲ್ಲಿ ಹಣದ ರೂಪದಲ್ಲಿ ತುಂಬಲಾರದಂತಹ ನಷ್ಟ ತನಗೆ ಉಂಟಾಗುತ್ತದೆ ಎನ್ನುವುದನ್ನು ತೋರಿಸಲೇಬೇಕು. ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ವಾದಿ ಎಂದಿಗೂ ದಾವಾ ಆಸ್ತಿಯ ಸ್ವಾಧೀನತೆಯಲ್ಲಿ ಇರುವುದಿಲ್ಲ ಎಂದು ಹೇಳುವುದರ ಮೂಲಕ ವಾದಿಯ ಸ್ವಾಧೀನತೆಯನ್ನು ಅಲ್ಲಗಳೆದ ಕಾರಣ ಒಂದು ವೇಳೆ ವಾದಿ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡದೆ ಇದ್ದಲ್ಲಿ ಪ್ರತಿವಾದಿ ದಾವಾ ಆಸ್ತಿಯಲ್ಲಿ ವಾದಿಯ ಸ್ವಾಧೀನತೆಗೆ ಹಸ್ತಕ್ಷೇಪ ಮಾಡಿದರೆ ಅದರಿಂದ ವಾದಿ ದಾವಾ ಆಸ್ತಿ ಅನುಭವಿಸುವುದರಿಂದ ವಂಚಿತಳಾಗುತ್ತಾಳೆ ಮತ್ತು ಪ್ರತಿವಾದಿ ದಾವಾ ಆಸ್ತಿಯಲ್ಲಿ ಮನೆಯನ್ನು ಒಂದು ವೇಳೆ ಕಟ್ಟಿದರೆ ಅದರಿಂದ ವಾದಿ ದಾವಾ ಆಸ್ತಿಯನ್ನು ಅನುಭವಿಸುವುದರಿಂದ ವಂಚಿತಳಾಗುತ್ತಾಳೆ ಅವಳಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಅಲ್ಲದೇ ಒಂದು ವೇಳೆ ವಾದಿ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಿದರೆ ಅದರಿಂದ ಪ್ರತಿವಾದಿಗೆ ಯಾವುದೇ ರೀತಿ ನಷ್ಟ

ಹಾಗೂ ಅನ್ಯಾಯ ಉಂಟಾಗುವುದಿಲ್ಲ ಅಲ್ಲದೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿ ತನಗೆ ಯಾವ ರೀತಿ ಸಂಬಂಧ ಇರುತ್ತದೆ ಎಂದು ಹೇಳಿರುವುದಿಲ್ಲ ಕಾರಣ ಮೇಲ್ನೋಟಕ್ಕೆ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಸಂಬಂಧ ಇಲ್ಲ ಎಂದು ಕಂಡು ಬರುತ್ತಿರುವುದರಿಂದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವುದರಿಂದ ಪ್ರತಿವಾದಿಗೆ ಯಾವುದೇ ರೀತಿ ನಷ್ಟ ಹಾಗೂ ಅನ್ಯಾಯ ಉಂಟಾಗುವುದಿಲ್ಲ ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡದೆ ಇದ್ದಲ್ಲಿ ಪ್ರತಿವಾದಿ ದಾವಾ ಆಸ್ತಿಯಲ್ಲಿ ಹಸ್ತಕ್ಷೇಪ ಮಾಡಿ ಮನೆಯನ್ನು ಕಟ್ಟಿದರೆ ಅದರಿಂದ ವಾದಿ ದಾವಾ ಆಸ್ತಿಯನ್ನು ಅನುಭವಿಸುವುದರಿಂದ ವಂಚಿತಳಾಗಿ ವಾದಿಗೆ ಹಣದ ರೂಪದಲ್ಲಿ ತುಂಬಲಾರದಂತಹ ನಷ್ಟ ಉಂಟಾಗುತ್ತದೆ ಆದ್ದರಿಂದ ಅನುಕೂಲತೆಯ ಒಲವು ವಾದಿಯ ಪರ ಇರುತ್ತದೆ ಮತ್ತು ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡದೆ ಇದ್ದಲ್ಲಿ ಹಣದ ರೂಪದಲ್ಲಿ ತುಂಬಲಾರದಂತಹ ನಷ್ಟ ವಾದಿಗೆ ಉಂಟಾಗುವುದರಿಂದ ಅನುಕೂಲತೆಯ ಒಲವು ವಾದಿಯ ಪರ ಇದೆ ಎಂದು ಮತ್ತು ವಾದಿಗೆ ಹಣದ ರೂಪದಲ್ಲಿ ತುಂಬಾಲಾರದಂತಹ ನಷ್ಟ ಉಂಟಾಗುವ ಕಾರಣ ಅಂಶ ೨ ನ್ನು ವಾದಿಯ ಪರ ಇದೆ ಎಂದು ಮತ್ತು ಅಂಶ ೩ ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

೯. ಅಂಶ ೪ :- ಮೇಲಿನ ಅಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ ಈ ಕೆಳಕಂಡಂತೆ ಮಾಡಿದ.

## ಆದೇಶ

ವಾದಿ ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ ೩೯ ನಿಯಮ ೧ ಮತ್ತು ೨ ಹಾಗೂ ಸಹ ವಾಚಕ ಕಲಂ ೧೫೧ ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ ೧ ನ್ನು ೧೦೦ ರೂ ಖರ್ಚಿನ ಮೇಲೆ ಪುರಸ್ಕರಿಸಲಾಗಿದೆ.

ದಾವಾ ಆಸ್ತಿಯಲ್ಲಿ ವಾದಿಯ ಸ್ವಾಧೀನತೆಗೆ ಹಸ್ತಕ್ಷೇಪ ಮಾಡದಂತೆ ದಾವೆ ಅಂತಿಮವಾಗಿ ಇತ್ಯರ್ಥಗೊಳ್ಳುವವರೆಗೂ ಪ್ರತಿವಾದಿಯ ವಿರುದ್ಧ ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ನೀಡಲಾಗಿದೆ.

**(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಕಂಪ್ಯೂಟರ್‌ನಲ್ಲಿ ಅಳವಡಿಸಿದ್ದನ್ನು ಪರಿಷ್ಕರಿಸಿ ಮುಕ್ತ ನ್ಯಾಯಾಲಯದಲ್ಲಿ ದಿನಾಂಕಃ ೦೪ನೇ ಫೆಬ್ರವರಿ ೨೦೧೭ ರಂದು ಆದೇಶವನ್ನು ಘೋಷಿಸಿದೆ)**

**(ವೈಕೆ.ಬೇನಾಳ)**
ಸಿವ್ಹಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಹರಪನಹಳ್ಳಿ